ಸಪ್ಲಿಮೆಂಟ್.

ಮೈಸೂರ ಗೆಜಿಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಗುರುವಾರ, ಸೆಪಟಂಬರ್ ತಾ॥ 26, ಸಕ್ 1907.

ಮೈಸೂರು ನ್ಯಾಯ ವಿಧಾಯಕ ಸಭೆಯ ನಡವಳಿಕೆಗಳ ಸಂಗ್ರಹ.

1907ನೆಯ ಆಗಸ್ಟ್ 28ನೆಯ ತಾರೀಖು ಬುಧವಾರದ ದಿನ ಅಪರಾಹ್ನ 3 ಘಂಟೆಗೆ ಪಬ್ಲಿಕ್ ಆಫಿಸ್ ಕಟ್ಟಡಗಳಲ್ಲಿರುವ ಸಭಾಮಂಟಪದಲ್ಲಿ (ಕೌನ್ಸಿಲ್ ಚೇಂಬರ್) ಸಭೆಯು ಸೇರಿತ್ತು.

ಬಂದಿದ್ದವರು.

ಶ್ರೀ ವಿ. ಪಿ. ಮಾಧವರಾವ್, ಸಿ. ಐ. ಇ., ದೀವಾನ್ (ಅಧ್ಯಕ್ಷರು).

ಉದ್ಯೋಗಪ್ರಯುಕ್ತವಾದ ಸಭಿಕರು.

,, ಟಿ. ಆನಂದರಾವ್, ಬಿ. ಎ., (ಮೊದಲನೆಯ ಕೌನ್ಸಿಲರ್).
,, ಕೆ. ಪಿ. ಪುಟ್ಟಣ್ಣ ಶೆಟ್ಟಿ, (ಎರಡನೆಯ ಕೌನ್ಸಿಲರ್).

ಹೆಚ್ಚಿನ ಸಭಿಕರು ಸರ್ಕಾರಿ.

,, ಎ. ರಂಗಸಾಮ್ಮಯ್ಯಂಗಾರ್, ಬಿ. ಎ., ಬಿ. ಎಲ್.
,, ಎಚ್. ಜೆ. ಭಾಭಾ, ಎಂ. ಎ.
,, ರಾವ್ ಬಹದ್ದೂರ್, ಎಲ್. ಮುತ್ತಣ್ಣ.
,, ಎಂ. ಕಾಂತರಾಜ ಅರಸು, ಬಿ. ಎ.
,, ಎಸ್. ನಾರಾಯಣರಾವ್.

ಸರ್ಕಾರಿ ಉದ್ಯೋಗಸ್ಥರಲ್ಲದವರು.

,, ವಿ. ಎ. ನರಸಿಂಹೈಯಂಗಾರ್.
,, ಎಂ. ಸಿ. ರಂಗೈಯಂಗಾರ್, ಬಿ. ಎ.
,, ಬಿ. ನಾಗಪ್ಪ, ಬ್ಯಾರಿಸ್ಟರ್ ಅಟ್ ಲಾ.
,, ಸೈಯದ್ ಅಮೀರ್ ಹುಸೇನ್.

ಬರದೆ ಇದ್ದವರು.

ಸರ್ಕಾರಿ ಉದ್ಯೋಗಸ್ಥರಲ್ಲದವರು.

,, ರಾಜಮಂತ್ರ ಪ್ರವೀಣ ಸಿ. ಶ್ರೀನಿವಾಸೈಯಂಗಾರ್.

,, ಕೆ ವೈಲಾರ ರಾವ್, ಬಿ. ಎ., ಬಿ. ಎಲ್. (ಸೆಕ್ರಟರಿ).

ದೀವಾನರವರು :—

ಈ ಸಭೆಗೆ ಬರಲು ಅನುಕೂಲಿಸಲಿಲ್ಲವೆಂದು ಹೇಳಿ ವಿ॥ ಸು॥ ಶ್ರೀನಿವಾಸ್ಯಯ್ಯಂಗಾರ್ರು ಒಂದು ಕಾಗದವನ್ನು ಕಳುಹಿಸಿದಾರೆ, ಅದರಲ್ಲಿ ಇಲ್ಲಿ ಪ್ರಸ್ತಾಪಿಸುವ ಬಿಲ್ಲುಗಳ ಮೂಲತತ್ವಗಳನ್ನು ತಾವು ಸಾಮಾನ್ಯವಾಗಿ ಒಪ್ಪಿದರೂ ಕೆಲವು ತಿದ್ದುಪಾಟುಗಳನ್ನು ಮಾಡಬೇಕಾಗಿದೆಯೆಂದು ತಾವು ಅಭಿಪ್ರಾಯಪಡುವುದಾಗಿಯೂ ಅಂಥಾ ತಿದ್ದುಪಾಟುಗಳನ್ನು ತಾವು ಕ್ರಮೇಣ ಸೂಚಿಸುವುದಾಗಿಯೂ ಹೇಳುತ್ತಾರೆ.

ಮಿ॥ ಹೇಮಾ ಹನುಮಂತಯ್ಯ, ಕೆಲಸದಿಂದ ನಿವೃತ್ತರಾದ ಅಸಿಸ್ಟೆಂಟ್ ಕಮಿಷನರ್, ಮಿ॥ ಎಸ್. ಆರ್. ಬಾಲಕೃಷ್ಣರಾವ್, ಅಡ್ವೋಕೇಟ್, ಪಟೇಲ ಸುಬ್ಬರಾಯಪ್ಪ ಮತ್ತು ಲಕ್ಷ್ಮೀನರಸಿಂಹಾಚಾರ್, ಇವರುಗಳಿಂದ ಬಂದ ಆರಿಕೆಗಳನ್ನು ಸಭೆಯ ಅಪ್ಪಣೆಯಂತೆ ಸೆಕ್ರಿಟೆರಿಯವರು ತಿಳಿಸಿದರು. ಮೊದಲ ಇಬ್ಬರ ಆರಿಕೆಗಳನ್ನು ಆಲೋಚನೆಯ ಬಗ್ಗೆ ನಿಲ್ಲಿಸಿಟ್ಟುಕೊಂಡು, ಮಿಕ್ಕ ಇಬ್ಬರ ಆರಿಕೆಗಳು ನಿಜವಾಗಿ ಸಭೆಯ ಪರ್ಯಾಲೋಚನೆಯಲ್ಲಿರುವಂಥಾ ವಿಷಯಕ್ಕೂ ಸಂಬಂಧಪಡದೆ ಇದ್ದುದರಿಂದ ಅವುಗಳನ್ನು ಕಟ್ಟಿ ಇಡಲಾಯಿತು.

ಮಿ॥ ನರಸಿಂಹ್ಯಯ್ಯಂಗಾರ್ರು ದೇವನಹಳ್ಳಿ ತಾಲ್ಲೂಕಿನ ರೈತರಿಂದ ತಮಗೆ ತಲಪಿದ ಒಂದು ಅರ್ಜಿಯನ್ನು ತಂದುಕೊಟ್ಟು ಅದು ಗ್ರಾಮ ಉದ್ಯೋಗಗಳ ಬಿಲ್ಲಿಗೆ ವಿರುದ್ಧವಾಗಿತ್ತೆಂದು ಹೇಳಿದರು.

1900ನೆ ಇಸವಿಯ 2ನೆದಾದ ಸ್ಟ್ಯಾಂಪು ರೆಗ್ಯುಲೇಷನನ್ನು ತಿದ್ದುಪಾಟುಮಾಡುವ ಬಿಲ್ಲು.

ಮಿ॥ ಎ. ರಂಗಸ್ವಾಮೈಯ್ಯಂಗಾರ್ :—

ಅಯ್ಯಾ,

ಸ್ಟ್ಯಾಂಪುಗಳಿಗೆ ಸಂಬಂಧಪಟ್ಟ 1900ರ 2ನೆಯ ರೆಗ್ಯುಲೇಷನನ್ನು ಇನ್ನೂ ತಿದ್ದುಪಾಟು ಮಾಡುವ ಒಂದು ಬಿಲ್ಲನ್ನು ಪ್ರಸ್ತಾಪಿಸುವುದಕ್ಕೆ ನಾವು ಅಪ್ಪಣೆಯನ್ನು ಕೇಳುತ್ತೇವೆ. ಆ ರೆಗ್ಯುಲೇಷನನ್ನು ಮೈಸೂರು ಸೀಮೆಯಲ್ಲಿ ಉಪಯೋಗದಲ್ಲಿದ್ದ ಹಿಂದಿನ 1879ರ 1ನೆ ಆಕ್ಟನ್ನು ತಿದ್ದುಪಾಟುಮಾಡಲು ಹುಟ್ಟಿದ 1899ನೆಯ ಇಂಡಿಯ್ಯ ಸ್ಟ್ಯಾಂಪು ಆಕ್ಟಿನ ಮೇರೆ ವಿಧಿಸಿತು. ಅಲ್ಲಿಂದೀಚೆಗೆ 1899ನೆ ಇಂಡಿಯ್ಯ ಸ್ಟ್ಯಾಂಪು ಆಕ್ಟು 1903ರ 6ನೆ ಆಕ್ಟು 1904ನೆ 11ನೆ ಆಕ್ಟು ಮತ್ತು 1906ರ 5ನೆ ಆಕ್ಟು ಇವುಗಳಿಂದ ಬಹಳವಾಗಿ ತಿದ್ದುಪಾಟಾಗಿದೆ. ಈಗ ನಾವು ಹೇಳುವ ತಿದ್ದುಪಾಟಿನ ರೆಗ್ಯುಲೇಷನಿನಲ್ಲಿ ಮೇಲ್ಕಂಡ ಮೂರು ತಿದ್ದುಪಾಟಿನ ಆಕ್ಟುಗಳ ಮೂಲಕ ಉಪಯೋಗಕ್ಕೆ ತಂದ ಎಲ್ಲಾ ಬದಲಾವಣೆಗಳನ್ನೂ ಸೇರಿಸಿ ಇದೆ.

ಈ ಬದಲಾವಣೆಗಳನ್ನು ಹತ್ತು ವಾಕ್ಯಗಳಲ್ಲಿ ವಿವರಿಸಿ ಇದೆ. ಇವುಗಳ ಪೈಕಿ 1902ನೆ ರೆಗ್ಯುಲೇಷನಿನ 40ನೆ ಪ್ರಕರಣದ (1) (*b*) ವಾಕ್ಯದ ಬದಲಾವಣೆಗೆ ಸಂಬಂಧಿಸುವ 7ನೆ ವಾಕ್ಯವು ಮೊದಲು ಪ್ರಸ್ತಾಪಿಸಲು ಅರ್ಹವಾಗಿದೆ. ಈ 40ನೆ ಪ್ರಕರಣದ (1) (*b*) ವಾಕ್ಯವು ಸಂಪೂರ್ಣವಾದ ದಂಡನೆಯನ್ನು ವಿಧಿಸುವುದರಿಂದ ಕಷ್ಟವು ಉಂಟಾಗುವುದೆಂದು ಡೆಪ್ಯುಟಿ ಕಮಿಷನರಿಗೆ ತಿಳಿದಿರುವಾಗಲೂ ಕೂಡ ಸರಿಯಾದ ಸ್ಟ್ಯಾಂಪು ರುಸುಮಿನ ಅಥವಾ ಸರಿಯಾದ ಸ್ಟ್ಯಾಂಪು ರುಸುಮಿಗೂ ದಸ್ತಾವೇಜಿಗೆ ಲಗತ್ತಾಗಿರುವ ಸ್ಟ್ಯಾಂಪ್ಗಿಗೂ ಇರುವ ವ್ಯತ್ಯಾಸದ ಹತ್ತರಷ್ಟು 5 ರೂಪಾಯಿಗೆ ವಿಸ್ತಾರ ಇದ್ದರೂ ಅದಕ್ಕೆ ಕಡಮೆಯಾದ ದಂಡವನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರಿಗೆ ಯಾವ ಸ್ವಾತಂತ್ರ್ಯವನ್ನೂ ಕೊಡುವುದಿಲ್ಲ. ಇದರಿಂದ ಉಂಟಾದ ಕಷ್ಟವನ್ನು ಪ್ರಜಾ ಪ್ರತಿನಿಧಿಗಳ ಸಭೆಯು ಹೋದಸಲ ಸೇರಿದಾಗ ತಿಳಿವಳಿಕೆಗೆ ಬಂತು. ಈ ಕಷ್ಟವನ್ನು ಪರಿಹರಿಸುವುದಕ್ಕಾಗಿ ಮೇಲ್ಕಂಡ ಒಳ ಪ್ರಕರಣದಲ್ಲಿ "ಸರಿಯಾದ ಹಾಸಲಿಗೆ ಕಮ್ಮಿ ಬಿದ್ದ ಭಾಗದ ಹತ್ತರಷ್ಟು" ಎಂಬ ಮಾತುಗಳಿಗೆ ಬದಲಾಗಿ "ಸರಿಯಾದ ಹಾಸಲಿಗೆ ಕಮ್ಮಿ ಬಿದ್ದ ಭಾಗದ ಹತ್ತರಷ್ಟಕ್ಕೆ ವಿಸ್ತಾರದ ಒಂದು" ಎಂಬ ಮಾತುಗಳನ್ನು ಸೇರಿಸಬೇಕೆಂದು ಯೋಚಿಸಿ ಇದೆ. 1904ರ 4ನೆ ಆಕ್ಟಿನ ಮೂಲಕ 1899ರ ಇಂಡಿಯ್ಯ ಸ್ಟ್ಯಾಂಪು ಆಕ್ಟಿನಲ್ಲಿ ಈ ಮೇಲ್ಕಂಡ ತಿದ್ದುಪಾಟನ್ನು ಆಗಲೇ ಮಾಡಿ ಇದೆ.

1900ರ 2ನೆ ರೆಗ್ಯುಲೇಷನಿನ 26ನೆ ಪ್ರಕರಣದ ಮೊದಲನೆ ನಿಯಮವನ್ನು ಬದಲಾಯಿಸುವ 4ನೆ ವಾಕ್ಯವು ಮತ್ತೊಂದು ವಿಶೇಷ ವಿಷಯವಾಗಿದೆ. ಈಗಿರುವ ನಿಯಮದಮೇರೆ ಸರ್ಕಾರದವರು ಕೊಡುವ ಗಣಿಯ ಗುತ್ತಿಗೆಗಳ ಮೇಲೆ ಭಾಗದ ಅಥವಾ ರಾಜಾದಾಯದ ಬೆಲೆಯು ಗೊತ್ತಿಲ್ಲದೆ ಇರುವಾಗ ವರ್ಷಕ್ಕೆ 20,000 ರೂಪಾಯಿಂದು ಊಹೆ ಕಟ್ಟುದ ಬೆಲೆಯ ಮೇಲೆ ಸ್ಟ್ಯಾಂಪು ರುಸುವನ್ನು ವಸೂಲ್ಮಾಡುವ ವಾಡಿಕೆಯು ಇದೆ. ಇದು ಚಿಕ್ಕ ಚಿಕ್ಕ ಅಲಾಭಕರವಾದ ಗಣಿಗಳಿಗೆ ತಕ್ಕದ್ದಾಗಿಲ್ಲ ಮತ್ತು ಕಷ್ಟವಾಗಿದೆ. ಈ ಕಷ್ಟವನ್ನು ಪರಿಹರಿಸಲು ಸರಕಾರಕ್ಕೆ ಕೊಡತಕ್ಕ ರಾಜಾದಾಯದ ವಿಷಯದಲ್ಲಿ ಡೆಪ್ಯುಟಿ ಕಮಿಷನರು ಮಾಡುವ ಮದಿಪಿಗೆ ಅನುಸಾರವಾಗಿ ಸರ್ಕಾರದವರು ಕೊಡುವ ಗಣಿ ಗುತ್ತಿಗೆಯ ಮೇಲೆ ಸ್ಟ್ಯಾಂಪು ರುಸುವನ್ನು ವಸೂಲ್ಮಾಡಬೇಕೆಂದು ನಿಯಮ ಮಾಡಬೇಕೆಂದು ಯೋಚಿಸಿ ಇದೆ. ಅಂಥಾ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರು ಕೊಡುವ ತೀರ್ಪುಗಳನ್ನು ಚೀಫ್ ಕಂಟ್ರೋಲಿಂಗ್ ರೆವಿನ್ಯು ಅಥಾರಿಟಿ (ರೆವಿನ್ಯೂ ವೈಲ್ವಿಚಾರಣೆಯ ಮುಖ್ಯ ಅಧಿಕಾರಿಯು) ಪುನರ್ವಿಮರ್ಶೆ ಮಾಡುವುದಕ್ಕೆ 9ನೆಯ ವಾಕ್ಯದಲ್ಲಿ ನಿಯಮಮಾಡಿದೆ.

ಮತ್ತೊಂದು ಸ್ವಲ್ಪ ವಿಶೇಷವಾದ ಬದಲಾವಣೆಯನ್ನು 1 (*a*) ಮತ್ತು 3 ವಾಕ್ಯಗಳ ಮೂಲಕ ಮಾಡಿ ಇದೆ. ಈ ಪೈಕಿ 1 (*a*) ವಾಕ್ಯವು "ವಿಕ್ರಯಕ್ಕೆ ಯೋಗ್ಯವಾದ ಸೆಕ್ಯೂರಿಟಿ ಪತ್ರ" ಎಂಬ ಉಕ್ತಿಯ ಅರ್ಥವನ್ನು ವಿವರಿಸುತ್ತದೆ. ತೋರಡ ಮಾನವಾಗಿ ತೀರಣಿ ಇಟ್ಟ ಸೆಕ್ಯೂರಿಟಿ ಪತ್ರವು ವಿಕ್ರಯಕ್ಕೆ ಯೋಗ್ಯವಾದಾಗ 1ನೆ ಷೆಡ್ಯೂಲಿನ 6ನೆ ಆರ್ಟಿಕಲಿನಲ್ಲಿ ವಿಧಿಸಿರುವ ರುಸುಮಿಗೆ ಬದಲಾಗಿ ಗೊತ್ತಾದ 8 ಆಣೆಯ ಒಂದು ರುಸುವನ್ನು ವಿಧಿಸುವುದಾಗಿ 3ನೆ ವಾಕ್ಯದಲ್ಲಿ ಸಲಹೆ ಮಾಡಿರುವ ಹೊಸ 23 A ಪ್ರಕರಣದ ವಿಚಾರದಲ್ಲಿ ಈ ಅರ್ಥವಿವರಣೆಯು ಅವಶ್ಯಕವಾಗಿದೆ.

761

ಮಿ॥ ಟಿ. ಆನಂದರಾವ್.

217

10 (1)ನೆ ವಾಕ್ಯವು ಸಹ ಸ್ವಲ್ಪ ಮುಖ್ಯವಾದುದು. ಅಡವುಗಳೂ ಒತ್ತೆಗಳೂ 1ನೆ ಷೆಡ್ಯೂಲಿನ 6ನೆ ಆರ್ಟಿಕಲಿಗೆ ಒಳಪಡುತ್ತವೆಯೊ ಇಲ್ಲವೊ ಎಂಬ ವಿಷಯದಲ್ಲಿ ಸ್ವಲ್ಪ ಸಂದೇಹವಿರುವುದಾಗಿ ತೋರುತ್ತದೆ. ಇದೇ ವಿಷಯದಲ್ಲಿ ತಿಳಿಯಬಂದ ಇತರ ನ್ಯೂನತೆಗಳೂ ಅಕ್ಷರಗಳೂ ಯಾವುವೆಂದರೆ—

(a) ಕೊಟ್ಟ ಸಾಲವು ಐದು ವರ್ಷಕ್ಕಿಂತ ಹೆಚ್ಚು ಕಾಲದನಂತರ ಪಾವತಿಯಾಗುವಂತೆ ಬಂದೋಬಸ್ತು ಮಾಡುವ ಬಗ್ಗೆ ತೋರಿಸಮಾನ ಹಾಕಿದ ಸಂದರ್ಭಕ್ಕೆ ಸದರಿ ಆರ್ಟಿಕಲಿನಲ್ಲಿ ನಿಯಮವು ವೇರ್ಪಟ್ಟಿಲ್ಲ;

ಅಥವಾ (b) ಪಡೆದ ಅಡ್ವಾನ್ಸು ಯಾವನೆ ಮುಂಗಡವು ಕೇಳಿದಾಗ ವಾಪಸಾಗುವಂತೆ ಏರ್ಪಟ್ಟ ಸಂದರ್ಭಕ್ಕೂ ಅದರಲ್ಲಿ ನಿಯಮವು ಏರ್ಪಟ್ಟಿಲ್ಲ.

ಆದುದರಿಂದ 10 (1)ನೆ ವಾಕ್ಯದಲ್ಲಿ, "ತೋರಿಸಮಾನದಿಂದ" ಎಂಬ ಮಾತನ್ನು ಬಿಟ್ಟುಬಿಟ್ಟು ಮೇಲ್ಕಂಡ ಆರ್ಟಿಕಲ್ಲು ಯಾವ ಕಾರ್ಯಕ್ಕೆ ವ್ಯಾಪಿಸಬೇಕೋ ಆ ಕಾರ್ಯದ ಸ್ವಭಾವವನ್ನು ಇನ್ನೂ ಸ್ಪಷ್ಟವಾಗಿ ವಿವರಿಸುವಂತೆ ಸದರಿ ಆರ್ಟಿಕಲ್ಲನ್ನು ವಿಸ್ತಾರವಾಗಿ ಬರೆಯುಬೇಕೆಂದು ಸಲಹೆ ಮಾಡಿದೆ. ಅಡವು ಒತ್ತೆಗಳನ್ನು ನಮೂದುಮಾಡಿ ಹೇಳಿ ದೃಶ್ಯಾಧಾರದ ಮಾತನ್ನು ಬಿಟ್ಟುಬಿಟ್ಟಿದೆ; ಆದುದರಿಂದ ದೃಶ್ಯಾಧಾರಕ್ಕೆ ಸಂಬಂಧಿಸುವ ಕಾರ್ಯಗಳೆಲ್ಲಾ ಎಂದರೆ ಒಂದು ಸಾಲದ ಅಥವಾ ಒಪ್ಪಂದದ ಸಲಿಕೆಯ ಬಗ್ಗೆ ಜಂಗಮಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಡದೆ, ಅದನ್ನು ಆಧಾರವಾಗಿ ಮಾತ್ರ ಒಪ್ಪಿಸಿಕೊಡುವ ಸಂದರ್ಭಗಳು ಈ ಆರ್ಟಿಕಲಿಗೆ ಒಳಪಡುವುದಿಲ್ಲ. ಐದು ವರ್ಷಕ್ಕಿಂತ ಹೆಚ್ಚು ಕಾಲವು ಕಳೆದ ನಂತರ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜುಗಳ ಮೇಲೂ ಐದು ವರ್ಷದೊಳಗೆ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜುಗಳ ಮೇಲೂ ಒಂದೇ ಸಮವಾದ ಹಾಸಲನ್ನು ಹಾಕಬೇಕೆಂದೂ; ಮತ್ತು ಕೇಳಿದಾಗ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜುಗಳ ಮೇಲೂ ಮೂರು ತಿಂಗಳಿಗಿಂತ ಹೆಚ್ಚು ಕಾಲದ ಅನಂತರ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜುಗಳ ಮೇಲೂ ಒಂದೇಸಮವಾದ ಹಾಸಲನ್ನು ಹಾಕಬೇಕೆಂದೂ ಸಲಹೆ ಮಾಡಿದೆ.

ಕಡೆಯಲ್ಲಿ, ಎಲ್ಲಾ ದಸ್ತಾವೇಜುಗಳಿಗೂ, ಅವುಗಳಿಂದ ಮುಂಗಡಗಳನ್ನು ಪಡೆದುದೂ ಅವುಗಳನ್ನು ಬರೆದುದೂ ಒಂದೇ ಕಾಲದಲ್ಲಿ ಆಗಿರಲಿ ಅಥವಾ ಇಲ್ಲದೆ ಇರಲಿ, ಏಕರೀತಿಯಾದ ಹಾಸಲನ್ನು ಹಾಕಬೇಕೆಂದು ಸಲಹೆಮಾಡಿದೆ.

5 (b), 6 ಮತ್ತು 10 (7)ನೆ ವಾಕ್ಯಗಳು ಬೆಂಕಿಯ ಮತ್ತು ಸಮುದ್ರದ ಇನ್ಷೂರೆನ್ಸು ಪಾಲಿಸಿಗಳಿಗೆ ಸಂಬಂಧಿಸುತ್ತವೆ. ಮತ್ತು ಇವುಗಳನ್ನು ಮೈಸೂರು ಸಂಸ್ಥಾನದಲ್ಲಿ ಉಪಯೋಗಿಸುವ ಸಂಭವವಿಲ್ಲದಿದ್ದರೂ, ನಮ್ಮ ಸ್ಟ್ಯಾಂಪು ಕಾನೂನಿನ ನಿಯಮಗಳನ್ನು ಬ್ರಿಟಿಷ್ ಇಂಡಿಯ ಆಕ್ಟಿನ ನಿಯಮಗಳಿಗೆ ಸರಿಯಾಗಿ ಮಾಡುವುದಕ್ಕೋಸ್ಕರ ಇವುಗಳನ್ನು ಸೇರಿಸಿದೆ.

ಸ್ವಲ್ಪಮಟ್ಟಿಗೆ ಕಾರ್ಯತಃ ಉಪಯುಕ್ತವಾದ ಕೆಲವು ಚಿಕ್ಕಲರೆ ಬದಲಾವಣೆಗಳನ್ನು ಮಾಡಬೇಕೆಂದು ಈ ಕೆಳಗಿನ ವಾಕ್ಯಗಳಲ್ಲಿ ಸಲಹೆ ಕೊಟ್ಟಿದೆ:

1 (c) ವಾಕ್ಯ.—ವ್ಯವಸ್ಥೆ ಮಾಡಬೇಕೆಂದಿರುವ ಸ್ವತ್ತನ್ನು ಬಾಯಿಮಾತಿನಿಂದ ಮೊದಲು ವಿಲೇವಾಡಿ ಅನಂತರ ಸ್ವತ್ತನ್ನು ವ್ಯವಸ್ಥೆ ಮಾಡುವಂಥವನೂ ಟ್ರಸ್ಟಿಗಳೂ ಸೇರುವಂಥ ಒಂದು ಟ್ರಸ್ಟಿನ ಡಿಕ್ಲರೇಷನ್ ಯಾನೆ ಪ್ರಕಟನೆಯಲ್ಲಿ ಸದರಿ ವಿಲೇಯ ಷರತ್ತುಗಳನ್ನು ಬರೆದಿಡುವುದೆಂಬ ಸುಲಭೋಪಾಯದಿಂದ ಸೆಟ್ಲ್‌ಮೆಂಟ್ಸ್ ಯಾನೆ ವ್ಯವಸ್ಥಾ ಪತ್ರಗಳ ಮೇಲೆ ಹಾಕಿರುವ ಹಾಸಲನ್ನು ಈಗ ಸುಲಭವಾಗಿ ತಪ್ಪಿಸಿಕೊಳ್ಳಬಹುದಾದ ಕಾರಣ ಇದಕ್ಕೆ ಅಡ್ಡಿಮಾಡುವ ಉದ್ದೇಶದಿಂದ ಸೆಟ್ಲ್‌ಮೆಂಟ್ ಎಂಬುದರ ಅರ್ಥವಿವರಣೆಗೆ ಇನ್ನು ಸ್ವಲ್ಪ ಹೆಚ್ಚಾಗಿ ಸೇರಿಸುವಂತೆ ಈ ವಾಕ್ಯದಲ್ಲಿ ಸಲಹೆಮಾಡಿದೆ. ಟ್ರಸ್ಟಿನ ಡಿಕ್ಲರೇಷನಿಗೆ 5ನೆ ಆರ್ಟಿಕಲಿನಿಂದ ವಿಧಿಸಲ್ಪಟ್ಟ ಹೆಚ್ಚು ಹಾಸಲಿಗೆ ಬದಲಾಗಿ 62ನೆ ಆರ್ಟಿಕಲಿನ ಮೇರೆ ಹದಿನೈದೇ ರೂಪಾಯಿನ ಹಾಸಲನ್ನು ವಿಧಿಸಬೇಕಾಗುತ್ತದೆ. ಈಗ ಸಲಹೆ ಮಾಡಿರುವಂತೆ ಸದರಿ ಅರ್ಥವಿವರಣೆಗೆ ಹೆಚ್ಚು ಸೇರಿಸುವುದರಿಂದ ಅಂಥಾ ದಸ್ತಾವೇಜುಗಳಿಗೆ ಮುಂದೆ ಸೆಟ್ಲ್‌ಮೆಂಟುಗಳಂತೆ ಸ್ಟ್ಯಾಂಪು ಹಚ್ಚಬೇಕಾಗುತ್ತದೆ.

10 (5)ನೆ ವಾಕ್ಯ—ಕೆಲವು ವೈರಿನ ಅಡಮಾನಗಳ ಮೇಲಿನ ಸ್ಟ್ಯಾಂಪು ಹಾಸಲನ್ನು ನಾಲ್ಕು ಆಣೆಯಿಂದ ಎರಡು ಆಣೆಗೆ ಇಳಿಸಿ ಇದೆ.

38ನೆ ವಾಕ್ಯ—ಉಪಯೋಗಿಸದೆ ಇರುವ ಭಾಷಾ ಕಾಗದಗಳಿ ಬೆಲೆಯನ್ನು ವಾಪಸುಕೊಡುವ ವಿಷಯದಲ್ಲಿ ರೆಗ್ಯುಲೇಷನಿನ 51ನೆ ಪ್ರಕರಣದಿಂದ ಕೊಟ್ಟಿರುವ ರಿಯಾಯಿತಿಯನ್ನು ಖಾಸಗಿ ಬ್ಯಾಂಕಿಂಗ್ ಸಂಸ್ಥೆಗಳಿಗೂ ವಿಸ್ತರಿಸುತ್ತದೆ.

ಮೇಲಿನ ವಾಕ್ಯಗಳು ಅಷ್ಟು ಮುಖ್ಯವಲ್ಲ ಅಥವಾ ಮೇಲಿನ ವ್ಯಾಕರಣಗಳಲ್ಲಿ ಸೂಚಿಸಿದ ಬದಲಾವಣೆಗಳನ್ನು ಮಾಡುವುದರಿಂದ ಆಕ್ಟಿನಲ್ಲಿಯೂ ಷೆಡ್ಯೂಲಿನಲ್ಲಿಯೂ ಮಾಡಬೇಕಾಗುವ ಇತರ ತಿದ್ದುಪಾಟುಗಳನ್ನೂ ಬದಲಾವಣೆಗಳನ್ನೂ ಮಾಡುವುದಕ್ಕೋಸ್ಕರ ಏರ್ಪಟ್ಟಿವೆ.

ಮಿ॥ ಎಸ್. ನಾರಾಯಣರಾಯರು ಸದರಿ ಬಿನ್ನಪವನ್ನು ಅನುಮೋದಿಸಿದರು. ತರುವಾಯ ಅದನ್ನು ಸಭೆಗೆ ಹಾಕಿ ನಿರ್ಣಯಿಸಲಾಯಿತು.

ಗ್ರಾಮ ಉದ್ಯೋಗಗಳ ಬಿಲ್ಲು.

ಮಿ॥ ಟಿ. ಆನಂದರಾವ್.

ಅಯ್ಯಾ,

ಸಭೆಯಲ್ಲಿ ಕೆಲಸ ನಡೆಯುವ ಬಗ್ಗೆ ಏರ್ಪಟ್ಟ ನಿಬಂಧನೆಗಳ ಪೈಕಿ 33ನೆ ನಿಬಂಧನೆಯ ಮೇರೆ ಮೈಸೂರು ಸೀಮೆಯ ಗ್ರಾಮ ಉದ್ಯೋಗಗಳಿಗೆ ಸಂಬಂಧಪಟ್ಟ ಕಾನೂನನ್ನು ಒಟ್ಟು ಸೇರಿಸಿ ತಿದ್ದುಪಾಟು ಮಾಡುವುದಕ್ಕೆ ಹುಟ್ಟಿದ ಬಿಲ್ಲನ್ನು ಸಭೆಯಲ್ಲಿ ಓದಬೇಕೆಂದು ಬಿನ್ನವಿಸಲು ಆಜ್ಞೆ ಬೇಡುತ್ತೇವೆ. ಈ ಬಿಲ್ಲನ್ನು ಮೈಸೂರು ಗೆಜೆಟ್ಟಿನಲ್ಲಿ ಅಚ್ಚುಹಾಕಿ ಪ್ರಕಟಿಸಿದೆ ಮತ್ತು

[ಮಿ॥ ಟಿ. ಆನಂದರಾವ್; ಮಿ॥ ರಂಗ್ಯೆಯ್ಯಂಗಾರ್; ಮಿ॥ ಎ. ರಂಗಸಾಮ್ಯೆಯ

ಇದರ ಪ್ರತಿಗಳನ್ನು ಈ ಸಭೆಯ ಸಭಿಕರಿಗೂ ಕೊಟ್ಟಿದೆ. ಈ ಬಿಲ್ಲಿನ ಜತೆಯಲ್ಲಿ ಅದರ ಉದ್ದೇಶಗಳ
ರಣೆ ಇವೆ. ಅವುಗಳನ್ನು ಸಭಿಕರು ಚೆನ್ನಾಗಿ ಓದಿ ನಿದರೆ ಉದ್ದೇಶಿಸಲ್ಪಟ್ಟ ನ್ಯಾಯದ ಮೂಲತತ್ವಗ
ವಿಷಯವಾಗಿ ಹೋದದಿವಸ ನಾನು ಹೇಳಿದುದನ್ನು ತಾವೇ ಕಂಡುಕೊಂಡಿದಾರೆನ್ನುವುದಕ್ಕೆ ಏನೂ ಸಂ
ತಿದ್ದುಪಾಟು ಮಾಡಬೇಕೆಂದು ಯಾವ ನೋಟಿಸುಗಳು ಬಂದಹಾಗೆ ಕಾಣುವುದಿಲ್ಲ. ಇದರಿಂದ ಬಿಲ್ಲು ದೊ
ದುದೆಂದಾಗಲಿ ಅಥವಾ ಅದನ್ನು ಈಗಿರುವುದಕ್ಕಿಂತ ಚೆನ್ನಾಗಿ ಮಾಡುವುದು ಅಸಾಧ್ಯವೆಂದಾಗಲಿ ಊಹಿ
ಈ ಸಂಬಂಧವಾದ ಸಲಹೆಗಳನ್ನು ಬಿಲ್ಲು ಕಮಿಟಿಗೆ ಹಾಕಲ್ಪಡುವ ಸ್ಥಿತಿಗೆ ಬಂದಾಗ ಮಾಡುವ ಬಗ್ಗೆ ನಿರ್ಣಯ
ಮಟ್ಟಿಗೆ ಹೀಗೆಯೇ ಸರಿ. ಇದಕ್ಕೆ ನಿದರ್ಶನವೇನೆಂದರೆ, ಈ ಬಿಲ್ಲಿನ 5, 6 ಮತ್ತು 7ನೆ ವಾಕ್ಯಗಳನ
ಧೀನ ಮಾಡಲ್ಪಟ್ಟ ಗ್ರಾಮಗಳಲ್ಲಿರುವ ಮುಖ್ಯ ಗ್ರಾಮೋದ್ಯೋಗಿಗಳಾದ ಪಟೇಲ, ಶಾನುಭೋಗ, ನೀರ
ತಳಾರಿ, ಇವರಿಗೂ ಸರ್ಕಾರಿ ಗ್ರಾಮಗಳಲ್ಲಿರುವ ಇವರ ಜತೆಯ ಅಧಿಕಾರಿಗಳಿಗೂ ಉದ್ಯೋಗಕ್ಕೆ ಅರ್ಹರಾ
ಉದ್ಯೋಗ ಸಂಬಂಧವಾದ ಸುಶಿಕ್ಷಣವನ್ನು ಕುರಿತು ವ್ಯತ್ಯಾಸವಿರುವುದಾಗಿ ತಿಳಿಯಬರುವುದು. ಈ ವ
ಮಾಡಲ್ಪಟ್ಟ ಗ್ರಾಮಗಳ ಸ್ವತ್ತು ಕರ್ತರಿಗೆ ನಷ್ಟ ಅಥವಾ ಕುಂದಕವಾಗುತ್ತದೆಂದು ನಮಗೆ ಅಭಿಪ್ರಾಯ
ಲ್ಪಟ್ಟ ಗ್ರಾಮದಲ್ಲಿ, ಗ್ರಾಮದ ಲೆಕ್ಕಗಳು ಎಷ್ಟು ಕೆಟ್ಟ ಸ್ಥಿತಿಯಲ್ಲಿ ಇಡಲ್ಪಟ್ಟಿವೆ ಎಂಬುವುದನ್ನು, ರವಿ
ಯವನ್ನು ವಸೂಲ್ಮಾಡುವುದೂ ಅದರ ಲೆಕ್ಕವನ್ನು ರೈತನಿಗೂ ಸ್ವತ್ತು ಕರ್ತನಿಗೂ ಒಪ್ಪಿಸುವುದೂ ಎ
ಎಂಬುವುದನ್ನೂ ನೋಡುವಲ್ಲಿ ಈ ಸ್ವತ್ತು ಕರ್ತರಿಗೆ ಗ್ರಾಮಾಧಿಕಾರಿಗಳ ಮೇರೆ ಬಿಲ್ಲಿನಲ್ಲಿ ಈಗ ಕೊಟ್ಟಿರುವ
ಚಾರಣೆಯನ್ನು ನಡೆಸಲು ಅನುಕೂಲಪಡಿಸಿಕೊಡಬೇಕೆಂಬುದಾಗಿ ನಾವು ಯೋಚಿಸುತ್ತೇವೆ. ಈ ಸಂಬ
ಬಿಲ್ಲು ಕಮಿಟಿಗೆ ಸಾಕಲ್ಪಡುವ ಸ್ಥಿತಿಗೆ ಬಂದಾಗ ಮಾಡಬೇಕೆಂದು ನಾವು ನಿಲ್ಲಿಸಿಕೊಂಡಿರುವೆವು. ಇನ್ನೊ
ದರೆ, ಕೆಲಸದಿಂದ ನಿವೃತ್ತರಾದ ಅಸಿಸ್ಟೆಂಟ್ ಕಮಿಷನರ್ ಮಿ! ಹೇಮಾ ಹನುಮಂತ್ಯೆಯನವರಿಂದ ಬಯ
ಸಲ್ಪಟ್ಟ ಅರಿಕೆಯಲ್ಲಿ ಈ ಬಿಲ್ಲನ್ನು ಚರ್ಚಿಸುವ ನಿಯುಕ್ತ ಸಮಾಜದವರು ಪರೀಕ್ಷಿಸುವುದಕ್ಕೆ ಯೋಗ್ಯವ
ಸಲಹೆಗಳಿವೆ. ಕೆಲವು ಸಂದರ್ಭಗಳಲ್ಲಿ ಗಂಡು ಮಗುವಿಲ್ಲದ ವಿಧವೆಯನ್ನು ಒಂದು ಉದ್ಯೋಗದ ಹಿಡು
ಳ್ಳಾಡಿಕೊಂಡು ಆಕೆಯು ತನಗೆ ಬದಲಾಗಿ ಇನ್ನೊಬ್ಬರನ್ನು ಕೆಲಸಕ್ಕೆ ನೇಮಿಸಿ ನದರಿ ಉದ್ಯೋಗದ ಸಂ
ಒಂದು ಭಾಗವನ್ನು ತಾನು ಇಟ್ಟುಕೊಳ್ಳುವಂತೆ ಅವಕಾಶಕೊಡುವುದು ಅವಶ್ಯಕವೆಂಬ ವಿಷಯದಲ್ಲಿ ನದ
ರು ಹೇಳಿರುವ ಮಾತುಗಳನ್ನು ಇಲ್ಲಿ ನಾವು ನೂಚಿಸಬಹುದು. ಕುಟುಂಬದ ಸ್ವತ್ತು ವಿಭಾಗವಾಗುವಾಗ
ಜೆಂದಿಗಿಯಲ್ಲಿ ಸೇರಿದುದೆಂದು ಭಾವಿಸಲ್ಪಟ್ಟು ಮೃತಪಟ್ಟ ಗಂಡನಾದವನ ಭಾಗಕ್ಕೆ ನದರಿ ಉದ್ಯೋಗವು ಬ
ಸಂದರ್ಭದಲ್ಲಿ ನದರೀ ವಿಧವೆಗೆ, ಗಂಡನು ಸಕ್ತಾಗ ಅವನ ಸ್ಥಾನಕ್ಕೆ ಬರಲು ಮಗನಿಲ್ಲದಿದ್ದರೆ, ನದರಿ ಉದ್
ಕುದ್ದಾಂಗವಾಗಿ ತಪ್ಪಿ ಆದರಿಂದ ಪ್ರಾಯಶಃ ಅವಳ ಜೀವನಕ್ಕೆ ಮಾರ್ಗವಿಲ್ಲದೆ ಹೋಗಬಹುದಾದುದರಿಂದ
ಬಹುಕಷ್ಟವಾಗುತ್ತದೆ. ಅವಳ ಅವಶ್ಯಕತೆಗಳಿಗೂ ಸರ್ಕಾರಿ ಉದ್ಯೋಗದ ಅವಶ್ಯಕತೆಗಳಿಗೂ ಹ
ಡುವುದು ಹೇಗೆ ಎಂದು ಯೋಚಿಸುವುದು ಮೊದಲು ನಿಯುಕ್ತ ಸಮಾಜದವರ ಕೆಲಸವಾಗಿಯೂ ಅನಂತ
ಗಿಯೂ ಇರುವುದು. ಸಂದರ್ಭಗಳು ಹೀಗಿರುವುದರಿಂದ ನದರಿ ಬಿಲ್ಲನ್ನು ಸಭೆಯಲ್ಲಿ ಓದಬೇಕೆಂದೂ ಈ
ನಿ ರಿಪೋರ್ಟು ಮಾಡುವುದಕ್ಕೆ 33ನೆ ನಿಬಂಧನೆಯ 2ನೆ ವಾಕ್ಯದ ಮೇರೆ ಸಭೆಯವರು ಒಂದು ನಿಯುಕ್ತ
ಸುವಂತೆ ಅಪ್ಪಣೆ ಕೊಡಬೇಕೆಂದೂ ವಿನ್ನವಿಸುತ್ತೇವೆ.

ಮಿ॥ ರಂಗ್ಯೆಯ್ಯಂಗಾರ್:—

ಮೊದಲನೆಯ ಕಾರ್ಯನಿರ್ವಾಹಕರು ಈಗತಾನೆ ಮಾಡಿದ ವಿನ್ನಹವನ್ನು ನಾವು ಮನಃಪೂರ್ವಕವಾಗಿ ಅನು
ಬಿಲ್ಲಿನ ಮೂಲ ತತ್ವಗಳನ್ನು ದೊಡ್ಡದೊಡ್ಡ ಸರ್ಕಾರಿ ಅಧಿಕಾರಿಗಳು ಬಹಳವಾಗಿ ಚರ್ಚಿಸಿರುತ್ತಾರೆ.
ಟು ಮಾಡುವ ಪರವಾಗಿ ಈಗ ಆಗಲೆ ಹೇಳಿರುವುದಕ್ಕೆ ಮೇರೆ ಇನ್ನು ಹೆಚ್ಚಾಗಿ ಹೇಳುವುದಕ್ಕೆ ಏನೂ ಉ
ನ ಪ್ರಸ್ತಾಪಕರೇ ಹೇಳಿದ ಹಾಗೆ ನಾವಾ ಕಾರಣಗಳಿಗಾಗಿ ಈ ಬಿಲ್ಲನ್ನು ಒಂದು ನಿಯುಕ್ತ ಸಮಾಜದ ಮು
ರಣವಾಗಿ ತಪಶೀಲಾಗಿ ಚರ್ಚಿಸಬೇಕು. ಈ ಬಿಲ್ಲನ್ನು ಒಂದು ನಿಯುಕ್ತ ಸಮಾಜಕ್ಕೆ ಹಾಕಬೇಕೆಂದು

ಮಿ॥ ಎ. ರಂಗಸಾಮ್ಯೆಯ್ಯಂಗಾರ್:—

ತಮ್ಮಗಳ ಅಪ್ಪಣೆಯಾದರೆ ಈಗ ಒಂದೆರಡು ಮಾತನಾಡಬೇಕೆಂದಿದ್ದೇವೆ. ನಾವು ಮಾಡಬೇಕೆಂ
ಗಳನ್ನೂ ಬಿಲ್ಲು ನಿಯುಕ್ತ ಸಮಾಜದ ಮುಂದೆ ಬಂದಾಗ ಮಾಡಬೇಕೆಂದು ನಿಲ್ಲಿಸಿಕೊಂಡಿರುವೆವು. ಆದ
ಸಮಾಜಕ್ಕೆ ಹಾಕುವುದಕ್ಕೆ ಮೊದಲು ಒಂದು ಮೂಲತತ್ವವನ್ನು ಕುರಿತು ಮಾತನಾಡಲಪೇಕ್ಷಿಸುತ್ತೇವೆ.
ಳು ಗ್ರಾಮ ಉದ್ಯೋಗಗಳ ವಂಶಪಾರಂಪರ್ಯವಾವೆ ಸ್ವಭಾವವನ್ನು ಕೆಡಿಸುವುದಾಗಿ ಎಣಿಸಿ ಇದೆ. ಬಿ
ಆದನ್ನು ನಿಯುಕ್ತ ಸಮಾಜಕ್ಕೆ ಕಳುಹಿಸುವುದಕ್ಕೆ ಮುಂಚೆ ಈ ಸಭೆಯವರು ಮೇಲ್ಕಂಡ ಅಂಶವನ್ನು
ಒಳ್ಳೆಯದಾಗಿ ತೋರುತ್ತದೆ, ಅಥವಾ ಈ ಸಭೆಯವರು ಆ ಅಂಶವನ್ನು ಕುರಿತು ತಮ್ಮ ಅಭಿಪ್ರಾಯವ
ಸಮಾಜದವರು ತಮ್ಮ ಚರ್ಚೆಗಳಲ್ಲಿ ಮೇಲ್ಕಂಡ ಅಭಿಪ್ರಾಯಕ್ಕೆ ಅನುಸಾರವಾಗಿ ಬಿಲ್ಲಿನ ನಿಯುಕ್ತ

[ಸಾಮೈಯ್ಯಂಗಾರರು; ಮಿ|| ಟಿ. ಆನಂದರಾವ್; ದೀವಾನರು; ಮಿ|| ಕೆ. ಪಿ. ಪುಟ್ಟಣ್ಣ ಶೆಟ್ಟಿ.]

ಇವರ ಇಷ್ಟು ದೀರ್ಘಕಾಲ ವರ್ಷಂಪ್ರತಿ ಗ್ರಾಮ ಉದ್ಯೋಗಸ್ಥರಿಂದ ಕೆಲಸ ತೆಗೆದುಕೊಳ್ಳುವುದು ಸರ್ಕಾರದವ
ಇರುತ್ತಿತ್ತು. ಮತ್ತೊಂದು ಕಾರಣದಿಂದಲೂ ಈ ಸಂಗತಿಯು ಮುಖ್ಯವಾದುದಾಗಿದೆ. ಗ್ರಾಮಸ್ಥರ ಸಂಸ್ಥೆ
ಯನ್ನು ಅಭಿವೃದ್ಧಿಪಡಿಸಿ ಅವರಿಗೆ ಮೇಲ್ವಿಚಾರಣೆಯ ಕೆಲವು ಅಧಿಕಾರಗಳನ್ನು ನಾವು ಕೊಡಲೇಬೇಕೆಂದಿದರೆ ಗ್ರಾ
ಮವು ಅಂಥಾ ಸಂಸ್ಥೆಗಳಿಗೆ ಪ್ರಾಚೀನವಾದ ಜನಸಮೂಹದ ಒಂದು ಮುಖ್ಯವಾದ ಅಂಗವಾಗಿ ಇರುವರು. ಒಂದೇ ಕುಟುಂ
ಬದಲ್ಲಿ ಉದ್ಯೋಗಗಳು ನಿಲ್ಲುವಂತೆ ಪ್ರಯತ್ನ ಮಾಡಿದ ಹೊರತು ಈ ಉದ್ಯೋಗಗಳಲ್ಲಿರುವ ಜನರು ಅವಶ್ಯವಾದಷ್ಟು
ಸಮರ್ಥರಲ್ಲವೆಂದು ಹೇಳಲಾರರು. ವಿದ್ಯಾಸಂಬಂಧವಾದ ಮತ್ತು ಇತರ ಯೋಗ್ಯತೆಗಳನ್ನು ಹೊಂದಿರುವುದು ಒಳ್ಳೆಯದೆ ಸರಿ,
ಆದರೆ ಗ್ರಾಮ ಉದ್ಯೋಗದ ವಂಶಪರಂಪರಾಗತವಾದ ಸ್ವಭಾವದಿಂದಲೂ ಒಂದು ಗ್ರಾಮದಲ್ಲಿ ಬಹುಕಾಲದಿಂದ ವಾಸ
ಮಾಡುತ್ತಾ ಇರುವುದರಿಂದಲೂ ಮತ್ತು ಗ್ರಾಮ ಉದ್ಯೋಗಸ್ಥರಿಗೆ ಅವಶ್ಯವಶ್ಯಕವಾದ ಗೌರವವು ಬರಲಾರದು. ಆದುದರಿಂದ
ಈ ಅಂಶವನ್ನು ಈ ಸಭೆಯು ಪರ್ಯಾಲೋಚನೆಗೆ ನಾವು ತರುವುದು ನ್ಯಾಯವಾಗಿ ತೋರುತ್ತದೆ. ಈಗ ವಿದ್ಯಾ
ವಂತರಿಗೆಲ್ಲ ಈ ಉದ್ಯೋಗಗಳ ವಂಶ ಪರಂಪರಾಗತವಾದ ಸ್ವಭಾವವನ್ನು ತೊಂದರೆಪಡಿಸಬಹುದೆಂದು ನಮಗೆ
ಗ್ರಾಮ ಉದ್ಯೋಗಸ್ಥರ ಕುಟುಂಬದಿಂದ ಉದ್ಯೋಗಕ್ಕೆ ಬೇಕಾದ ಮನುಷ್ಯನನ್ನು ಆರಿಸುವ ಸ್ವಾತಂತ್ರ್ಯವನ್ನೆ
ಮಿಷನರುಗಳಿಗೆ ಕೊಟ್ಟಿರುವುದು ನಿಜವೆ, ಆದರೆ ಒಂದಾವರ್ತಿ ಆ ಕುಟುಂಬದಲ್ಲಿ ಯೋಗ್ಯತೆ ಹೊಂದಿದವನು
ಆ ಉದ್ಯೋಗವು ಕುದ್ರಾಂಗವಾಗಿ ಕುಟುಂಬದ ಹೊರಗೆ ಹೊರಟುಹೋಗಬಹುದು.

ಮಿ|| ಟಿ. ಆನಂದರಾವ್ :—

ಇದಕ್ಕೆ ಗೊತ್ತಿಗೆ ಬರದೆ ಹೋಗಲಿಲ್ಲ. ಗ್ರಾಮ ಉದ್ಯೋಗಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಯಾವುದು ಅವಶ್ಯವೋ
ಆ ಗ್ರಾಮ ಉದ್ಯೋಗಗಳ ಎಲ್ಲಾ ಸಂಪ್ರದಾಯಗಳಿಗೂ ಗೌರವ ಕೊಡುವೆವೆಂದು ನಾವು ಹೇಳಿದೆವು.

ದೀವಾನರು :—

ಉದ್ಯೋಗಗಳಿಗೆ ನೇಮಕಗಳನ್ನು ಮಾಡುವುದರಲ್ಲಿ ನಾವು ಬಹುಕಾಲದಿಂದ ಅನುಸರಿಸುತ್ತಿದ್ದ ನಿಯಮವನ್ನು
ಬಿಟ್ಟುಹೋಗುವ ಅಭಿಪ್ರಾಯವು ಇರುವಂತೆ ನಮಗೆ ತೋರುವುದಿಲ್ಲ. ವಂಶ ಪರಂಪರಾಗತದ ನಿಯಮವು ಸಂ
ಪೂರ್ಣವಾಗಿ ಅನ್ವಯಿಸಲ್ಪಟ್ಟಿರುವುದು, ಅದು ಒಬ್ಬ ಮನುಷ್ಯನ ಯೋಗ್ಯತೆಗೆ ವಿರುದ್ಧವಾಗಿರುವ ಸಂದರ್ಭದಲ್ಲಿ ಮಾತ್ರ ಅದ
ನ್ನು ಬಿಡಬೇಕಾಗುವುದು, ಆಗಲೂ ಕೂಡ ಉದ್ಯೋಗವನ್ನು ಕುಟುಂಬದಿಂದ ಕುದ್ರಾಂಗವಾಗಿ ತೆಗೆದುಕೊಂಡುಬಿಡು
ವುದಿಲ್ಲ.

ವಿಷಯವನ್ನು ಸಭೆಯ ಸಮ್ಮತಿಗೆ ಹಾಕಿ ನಿರ್ಣಯಿಸಲಾಯಿತು; ಮತ್ತು ಬಿಲ್ಲನ್ನು ಮಿ|| ಟಿ. ಆನಂದರಾವ್, ಮಿ|| ಎ.
ಸುಬ್ಬರಾವ್, ಮಿ|| ವಿ. ಎಸ್. ನರಸಿಂಹಯ್ಯಂಗಾರ್, ಮಿ|| ಎಂ. ಕಾಂತರಾಜ ಅರಸು, ಮತ್ತು ಮಿ|| ಎಂ. ಸಿ. ರಂಗಸ್ವಾ
ಮಿ ಸೇರಿರುವ ಒಂದು ನಿಯುಕ್ತಸಮಾಜಕ್ಕೆ 1907ರ ನವೆಂಬರ್ 28ನೆ ತಾರೀಖಿಗೆ ಮುಂಚೆ ರಿಪೋರ್ಟು ಮಾಡಲು
ಆಜ್ಞಾಪಿಸಲಾಯಿತು.

ಪೊಲೀಸು ಬಿಲ್ಲು.

ಮಿ|| ಕೆ. ಪಿ. ಪುಟ್ಟಣ್ಣಶೆಟ್ಟಿ :—

ಈ ಮುಖ್ಯವಾದ ಮೂಲತತ್ವಗಳನ್ನು ನಮ್ಮ ಮೊದಲಿನ ಉಪನ್ಯಾಸದಲ್ಲಿ ಮೊದಲೇ ವಿವರಿಸಿದೆವೆ. ಇದಕ್ಕೆ ನಿಮ್ಮ
ಮಾನ ಪತ್ರಿಕೆಗಳಲ್ಲಿ ಬಂದ ಕೆಲವು ಆಕ್ಷೇಪಣೆಗಳನ್ನು ಮಾತ್ರ ಕುರಿತು ಇಲ್ಲಿ ಹೇಳುವೆವು.
ಸಂಬಂಧಪಟ್ಟು ಎರಡು ತರದ ಆಕ್ಷೇಪಣೆಗಳು ಹುಟ್ಟಿವೆ. ಮೊದಲಿನ ಆಕ್ಷೇಪಣೆಯು ಅಮಲ್ದಾರರಿಗೂ ಡೆಪ್ಯೂಟಿ
ಕಮಿಷನರುಗಳಿಗೂ ಪೊಲೀಸು ಅಧಿಕಾರಗಳನ್ನು ನಿಲ್ಲಿಸಿರುವುದನ್ನು ಕುರಿತುದಾಗಿದೆ; ಎರಡನೆಯ ಆಕ್ಷೇಪಣೆಯು ವಿಲ್ಕಿಂಸನ್ ವಿದ್ಯಾಪೀ
ಠದವರೂ ಕಾರ್ಯನಿರ್ವಾಹಾಧಿಕಾರಗಳನ್ನೂ ಜಾಮೀನಲ್ ಯಾ ದಂಡನಾ ಅಧಿಕಾರಗಳನ್ನೂ ಪ್ರಯೋಗಿಸಬೇಕೆಂಬ ಮೂ
ಲಕ ಬಿಲ್ಲು ಗೊಣಗೆ ತೆಗೆದುಕೊಳ್ಳಲಿಲ್ಲವೆಂದು ಯೋಚಿಸಿ ಅದರಲ್ಲಿ ತಪ್ಪು ಕಂಡು ಹಿಂತಿರುಗುತ್ತದೆ. ಮೊದಲನೆಯ
ವಿಷಯದಲ್ಲಿ—ಅಮಲ್ದಾರರೂ ಡೆಪ್ಯೂಟಿ ಕಮಿಷನರೂ ಪೊಲೀಸು ಅಧಿಕಾರಿಗಳ ಮೇಲೆ ಮೇಲ್ವಿಚಾರಣೆಯ ಅಧಿಕಾ
ರವುಳ್ಳವರಾಗಿರುವ ಪ್ರಯೋಜನಗಳನ್ನು ಕುರಿತು ಹಿಂದಿನ ಸಂದರ್ಭದಲ್ಲಿ ನಾವು ಸಾಕಷ್ಟಾದಷ್ಟು ಹೇಳಿರುವುದರಿಂದ
ಇನ್ನು ಇನ್ನೂ ಹೇಳುವುದು ಅವಶ್ಯಕವಾಗಿ ತೋರುತ್ತದೆ. ಆದರೂ ವಿಲ್ಕಿಂಸನ್ ಬಿಲ್ಲು ಈಗಿನ ವಿದ್ಯಮಾನಗಳ
ಸಾಮರ್ಥ್ಯವೆಂದೂ ಅದು ಈಗಿನ ಕೃಮವನ್ನು ಎಲ್ಲಿ ಬಿಟ್ಟುಹೋಗುವುದೆಯೋ ಆ ಸಂದರ್ಭದಲ್ಲಿ ಪೊಲೀಸು ಅಧಿ
ಕಾರವುಳ್ಳವರಿಗಿಂತ ಹೆಚ್ಚು ಸ್ವಾತಂತ್ರ್ಯವನ್ನು ಕೊಡುತ್ತದೆಯೆಂದೂ ತಿಳಿಸಬಹುದು. ಈ ಬಿಲ್ಲು ಬಹುಕಾಲದಿಂದ
ಡೆಪ್ಯೂಟಿ ಕಮಿಷನರಿಗೂ ಪೊಲೀಸು ಅಧಿಕಾರಗಳನ್ನು ಮುಂದೆಯೂ ನಡೆಸುತ್ತದೆಯೇ ಹೊರತು ಮತ್ತೇನೂ
ಅನುಭವ ಯಾವ ಅನಾನುಕೂಲವನ್ನಾಗಲಿ ಅವ್ಯಾಯವನ್ನಾಗಲಿ ತಂದಿರುವುದಿಲ್ಲ. ಆದುದ
ರಿಂದ ನಿರ್ವಾಹಾಧಿಕಾರಿಗಳಿಗೆ ಅವರ ಪೊಲೀಸು ಅಧಿಕಾರಗಳನ್ನು ತಪ್ಪಿಸುವುದಕ್ಕೆ ಸರಿಯಾದ ಕಾರಣಗಳನ್ನು ತೋ
ರಿಸುವ ಕೃಮವನ್ನು ಅಪೇಕ್ಷಿಸುವವರೆಗೆ ಮೇರೆ ಕಟ್ಟಿರುತ್ತದೆ. ಪೊಲೀಸು ಕಾರ್ಯನಿರ್ವಾಹಾಧಿಕಾರಿಗಳನ್ನು
ಜಿಲ್ಲೆಯಲ್ಲಿನ ಮುಖ್ಯವಾದ ಕಾರ್ಯನಿರ್ವಾಹಾಧಿಕಾರಿಗಳಿಗೆ ಕೊಡುವುದಕ್ಕೆ ನ್ಯಾಯವಾಗಿ ಯಾವ ಆಕ್ಷೇಪಣೆ

[ಮಿ॥ ಕೆ. ಪಿ. ಪುಟ್ಟಣ್ಣ ಶೆಟ್ಟಿ; ಮಿ॥ ಟಿ. ಆನಂದರಾವ್; ಮಿ॥ ನಾಗಪ್ಪ.]

ಈ ಬಿಲ್ಲು ಕಾರ್ಯನಿರ್ವಾಹಾಧಿಕಾರಿಗಳ ಜುಡಿಷಲ್ ಯಾ ದಂಡನಾಧಿಕಾರಿಗಳ ಸೇರಿಕೆಯನ್ನು ಸ್ಥಿರಪಡಿಸುತ್ತದೆ, ಎಂಬ ಆಕ್ಷೇಪಣೆಯು ಬಿಲ್ಲಿನ ಅಭಿಪ್ರಾಯದ ಮತ್ತು ಉದ್ದೇಶಗಳ ತಪ್ಪು ತಿಳಿವಳಿಕೆಯ ಮೇಲೆ ಹುಟ್ಟಿದೆ. ಕಾರ್ಯನಿರ್ವಾಹಾಧಿಕಾರಿಗಳ ಮತ್ತು ಜುಡಿಷಲ್ ಯಾ ದಂಡನಾಧಿಕಾರಿಗಳ ಸೇರಿಕೆಯನ್ನು ಕೊಂಡಾಡಿ ಇದೆ ಅಥವಾ ಲಘೂಕರಿಸಿ ಇದೆ ಎಂಬ ಊಹೆಯು ನ್ಯಾಯವಾದುದೆಂದು ತೋರಿಸುವುದಕ್ಕೆ ಬಿಲ್ಲಿನಲ್ಲಿಯಾಗಲಿ ಬಿಲ್ಲನ್ನು ಪ್ರಸ್ತಾಪಿಸುವುದರಲ್ಲಿ ನಾವು ಮಾಡಿದ ಉಪನ್ಯಾಸದಲ್ಲಿಯಾಗಲಿ ಏನೂ ಇರುವುದಿಲ್ಲ. ಈ ವಿಷಯವು ಬಹಳ ದೊಡ್ಡದಾಗಿಯೂ ಕಷ್ಟವಾದುದಾಗಿಯೂ ಇದೆ. ಇದನ್ನು ನಾನಾ ಮುಖವಾಗಿ ಆಲೋಚಿಸಬೇಕಾಗಿದೆ. ಪೊಲೀಸು ಸೈನ್ಯದ ಸಂಸ್ಥಾಪನೆ ಸುಶಿಕ್ಷಣಗಳನ್ನೆ ಮುಖ್ಯ ವಿಷಯವಾಗಿ ಉಳ್ಳ ಒಂದು ಬಿಲ್ಲಿನಲ್ಲಿ ಈ ವಿಷಯವನ್ನು ಚೆನ್ನಾಗಿ ಹೇಳುವುದಕ್ಕೆ ಆಗುವುದಿಲ್ಲ. ಈ ಬಿಲ್ಲಿನಲ್ಲಿ ಮೇಲ್ಕಂಡ ಕಾರ್ಯನಿರ್ವಾಹಾಧಿಕಾರಿಗಳ ಪೊಲೀಸು ಅಧಿಕಾರಗಳನ್ನು ಮುಂದೆಯೂ ನಡೆಸುವುದು ಬಳ್ಳಿಯದಲ್ಲವೆ, ಎಂಬುವುದನ್ನು ಮಾತ್ರ ನಾವು ಇಲ್ಲಿ ಯೋಚಿಸಬೇಕಾಗಿದೆ. ಈ ಸಂಬಂಧದಲ್ಲಿ ಕಾರ್ಯನಿರ್ವಾಹಾಧಿಕಾರಿಗಳನ್ನೂ ಜುಡಿಷಲ್ ಯಾ ದಂಡನಾಧಿಕಾರಿಗಳನ್ನೂ ಪ್ರತ್ಯೇಕಿಸುವ ಕುದ್ದಾಂಗವಾಗಿ ಬೇರೆ ವಿಷಯವನ್ನು ಚರ್ಚಿಸುವುದರಿಂದ ಯಾವ ಪ್ರಯೋಜನವೂ ನಮಗೆ ತೋರಲಿಲ್ಲ. ಆದರೂ ಈ ವಿಷಯವನ್ನು ಸರ್ಕಾರದವರು ಆಲೋಚಿಸುತ್ತಿದಾರೆಂದು ನಾವು ಹೇಳಬಹುದು.

ಇಷ್ಟುಮಟ್ಟಿಗೆ ಹೇಳಿ ಸಭೆಯಲ್ಲಿ ಈ ಬಿಲ್ಲನ್ನು ಓದಬೇಕೆಂದು ನಾವು ಬಿನ್ನವಿಸುವೆವು.

ಮಿ॥ ಬಿ. ನಾಗಪ್ಪನವರು ಈ ಬಿನ್ನಹವನ್ನು ಅನುಮೋದಿಸಿ ಈ ಬಿಲ್ಲಿನ ಸಾಮಾನ್ಯವಾದ ಮೂಲತತ್ವಗಳನ್ನು ತಾವು ಬಿಚ್ಚಿ ರುವುದಾಗಿ ಹೇಳಿದರು.

ಈ ಬಿನ್ನಹವನ್ನು ಸಭೆಯ ಸಮ್ಮತಿಗೆ ಹಾಕಿ ನಿರ್ಣಹಿಸಲಾಯಿತು ಮತ್ತು ಬಿಲ್ಲನ್ನು ಮಿ॥ ಕೆ. ಪಿ. ಪುಟ್ಟಣ್ಣಶೆಟ್ಟಿ, ಮಿ॥ ವಿ. ಎ. ನರಸಿಂಹೈಯ್ಯಂಗಾರ್, ಮಿ॥ ಎಂ. ಸಿ. ರಂಗೈಯ್ಯಂಗಾರ್ ಮತ್ತು ಮಿ॥ ಬಿ. ನಾಗಪ್ಪ, ಇವರು ಸೇರಿರುವ ನಿಯುಕ್ತ ಸಮಾಜಕ್ಕೆ 1907ರ ನವೆಂಬರು 28ಕ್ಕೆ ಮೊದಲು ರಿಪೋರ್ಟು ಮಾಡುವ ಬಗ್ಗೆ ಕಳುಹಿಸಲಾಯಿತು.

1900ರ 3ನೆಯದಾದ ಕೋರ್ಟು ರುಸುಮುಗಳ್ಳ ರೆಗ್ಯುಲೇಷನ್ನನ್ನು ತಿದ್ದುಪಾಟು ಮಾಡುವ ಬಿಲ್ಲು.

ಮಿ॥ ಟಿ. ಆನಂದರಾವ್:—

ಅಯ್ಯಾ,

ಈ ವಿಷಯದಲ್ಲಿ ವಿಧಿಸಲ್ಪಟ್ಟ ಕ್ರಮಗಳು ನೆರವೇರಿರುವುದರಿಂದ 1900ರ 3ನೆಯದಾದ ಮೈಸೂರು ಕೋರ್ಟು ಫೀಜು ರೆಗ್ಯುಲೇಷನಿನ 4ನೆಯ ಪ್ರಕರಣವನ್ನು ತಿದ್ದುಪಾಟು ಮಾಡುವ ಬಿಲ್ಲನ್ನು 33ನೆ ನಿಬಂಧನೆಯ ಮೇರೆ ಈ ಸಭೆಯಲ್ಲಿ ಓದಬೇಕೆಂದು ನಾವು ಬಿನ್ನವಿಸುವೆವು.

2. ಈ ತಿದ್ದುಪಾಟಿಗೆ ಇರುವ ನ್ಯಾಯವಾದ ಕಾರಣವನ್ನು ಹಿಂದಿನ ದಿವಸದ ಸಭೆಯಲ್ಲಿ ನಾವು ಹೇಳಿರುವುದಲ್ಲದೆ ಉದ್ದೇಶಗಳ ಮತ್ತು ಕಾರಣಗಳ ವಿವರಣೆಯಲ್ಲಿಯೂ ಕೂಡ ಹೇಳಿ ಇದೆ. ಇದಲ್ಲದೆ ಜಮಿನಿನ ಒಡೆಯನಿಗೂ ಒಕ್ಕಲಿಗೂ ಇರುವ ವ್ಯಾಜ್ಯಗಳಲ್ಲಿ ಈಗಿನ ನ್ಯಾಯರೀತ್ಯಾ, ಯಾವ ಜಮಿನಿನಿಂದ ಬಿಟ್ಟು ಒಕ್ಕಲು ಅನ್ಯಾಯವಾಗಿ ಹೊರಡಿಸಲ್ಪಟ್ಟಿರುತ್ತಾನೆಯೋ ಅಂಥಾ ಜಮಿನಿನ ಸ್ವಾಧೀನತೆಯನ್ನು ಪಡೆಯುವುದಕ್ಕಾಗಿ ಒಕ್ಕಲು ಜಮಿನಿನ ಒಡೆಯನ ಮೇಲೆ ವ್ಯಾಜ್ಯ ಮಾಡುವಾಗ ಕೋರ್ಟು ರುಸುವಿನ ರೆಗ್ಯುಲೇಷನಿನ 4ನೆ ಪ್ರಕರಣದ (Xi) (e) ವಾಕ್ಯದಲ್ಲಿ ಹೇಳಿರುವ ಮೇರೆ ವರ್ಷಗಟ್ಟಿಯ ಗುತ್ತಿಗೆ ಅಥವಾ ಬಾಡಿಗೆಗೆ ಅನುಗುಣವಾಗಿ ಕೊಡತಕ್ಕ ಕೋರ್ಟು ರುಸುವನ್ನು ಲೆಕ್ಕ ಮಾಡಲಾಗುವುದು. ಆದರೆ ಒಕ್ಕಲು ಅನ್ಯಾಯವಾಗಿ ಸ್ವಾಧೀನದಲ್ಲಿಟ್ಟುಕೊಂಡಿರುವ ಜಮಿನಿನ ಸ್ವಾಧೀನತೆಯನ್ನು ಪಡೆಯಲು ಜಮಿನಿನ ಒಡೆಯನು ಒಕ್ಕಲಿನ ಮೇಲೆ ವ್ಯಾಜ್ಯ ಮಾಡುವಾಗ ಬೇರೆ ಆಧಾರದ ಮೇಲೆ ಎಂದರೆ, ಬಾಡಿಗೆ ಯಾ ಗುತ್ತಿಗೆಯನ್ನು ಬಿಟ್ಟು ಜಮಿನಿನ ಬೆಲೆಯ ಮೇಲೆ ಕೋರ್ಟು ರುಸುವು ಲೆಕ್ಕ ಮಾಡಲ್ಪಡುತ್ತದೆ. ಪ್ರತಿ ಸಂದರ್ಭದಲ್ಲಿಯೂ ವರ್ಷಗಟ್ಟಿಯ ಗುತ್ತಿಗೆಯ ಮೇರೆ ಕೋರ್ಟು ರುಸುವನ್ನು ಲೆಕ್ಕ ಮಾಡುವ ಹಾಗೆ ಈಗಿನ ನಿಯಮವನ್ನು ಬದಲಾಯಿಸಲು ಬಿಲ್ಲಿನಲ್ಲಿ ಯೋಚಿಸಿ ಇದೆ. ಒಕ್ಕಲುತನದ ಪರತ್ತುಗಳನ್ನು ನ್ಯಾಯಕ್ಕೆ ವಿರೋಧ ಈಗ ನಡೆಯುವ ಹಾಗೆ ಎಳೆದಾಡುವ ವಿಲೋಭನೆಯನ್ನು ತಪ್ಪಿಸುವುದಕ್ಕೋಸ್ಕರ ಒಂದು ಕನಿಷ್ಠ ಮೊತ್ತವನ್ನು ಕೋರ್ಟು ರುಸುವಾಗಿ ಗೊತ್ತು ಮಾಡುವುದಾಗಿ ಯೋಚಿಸಿ ಇದೆ. ಇದು ಹೇಗೆಂದರೆ, ಕೊಡತಕ್ಕ ಕೋರ್ಟು ರುಸುವು ಒಂದು ಗೊತ್ತಾದ ರುಸುವಾದ 10 ರೂಪಾಯಿಗಾಗಿ ಆಗಲಿ ಅಥವಾ ಕಡೇಸಲದ ವರ್ಷಗಟ್ಟಿಯ ಬಾಡಿಗೆ ಯಾ ಗುತ್ತಿಗೆಗೆ ಅನುಗುಣವಾಗಿಯಾಗಲಿ, ಇವೆರಡರಲ್ಲಿ ಯಾವುದು ಹೆಚ್ಚಾಗಿದೆಯೋ ಅದಾಗಿರಬೇಕು. ಈಗ ಉದ್ದೇಶಿಸಿರುವ ಬಿಲ್ಲು ಚಿಕ್ಕದಾಗಿಯೂ ಸುಲಭವಾಗಿಯೂ ಇದೆ ನಿಯುಕ್ತ ಸಮಾಜದ ತಂಟೆಗೆ ಹೋಗದೆ ಬಿಲ್ಲನ್ನು ಕುರಿತು ಪ್ರವರ್ತಿಸಲು ಈ ಸಭೆಯು ಸಿದ್ಧವಾಗಿಲ್ಲ ಎಂಬುದನ್ನು ನಾವು ಅರಿಯೆವು.

ಮಿ॥ ಬಿ. ನಾಗಪ್ಪ:—

ಈ ಬಿನ್ನಹವನ್ನು ನಾವು ಅನುಮೋದಿಸುವೆವು. ನಿಯುಕ್ತ ಸಮಾಜದ ಆಲೋಚನೆಯ ಬಗ್ಗೆ ಈ ಬಿಲ್ಲನ್ನು ಕಳುಹಿಸಲವಶ್ಯವಿಲ್ಲ.

ಈ ಪ್ರಕರಣದಲ್ಲಿ ಸ್ಪಷ್ಟವಾಗಿ ಬಂದು ತಪ್ಪಿವೆ. ಅದೇನೆಂದರೆ, ಆದರಲ್ಲಿ ಒಬ್ಬ ಒಕ್ಕಲು ಜಮಿನಿನ ಒಡೆಯನಿಗೆ ಹಕ್ಕಿಲ್ಲವೆಂದು ಹೇಳುವ ಸಂದರ್ಭಗಳಿಗೆ ನಿಯಮವು ಮಾಡದೆ ಇರುವುದರಿಂದ ವಾದಿಯು ತನ್ನ ದಾವಾ ಅರ್ಜಿಯನ್ನು ತಿದ್ದುಪಾಟು ಮಾಡಿ ತನ್ನ ಹಕ್ಕನ್ನು ರುಜುವಾತು ಮಾಡಲು ಕೋರ್ಟಿನವರು ಅಪ್ಪಣೆ ಕೊಡುತ್ತಾರೆ. ಅಂಥಾ ಸಂದರ್ಭಗಳಲ್ಲಿ ಹೆಚ್ಚು ಕೋರ್ಟು ರುಸುಂಗಳನ್ನು ವಸೂಲಾಡಲು ಕೋರ್ಟಿನವರಿಗೆ ಅಧಿಕಾರ ಕೊಡುವುದಕ್ಕೆ ಯಾವ ನಿಯಮವೂ ಇಲ್ಲ. ಅಧಿಕಾರ ಸರಹದ್ದಿನ ವಿಷಯವನ್ನು ಕುರಿತು ಕೂಡ ಕಷ್ಟವು ಬರುವುದು.

[ಮಿ॥ ಬಿ. ನಾಗಪ್ಪ ; ಮಿ॥ ರಂಗೈಯ್ಯಂಗಾರು.]

ಈ ಕೊರತೆಗಳನ್ನು ಪರಿಹರಿಸುವುದಕ್ಕೋಸ್ಕರ ಸಭೆಯು ಮುಂದಿನ ಸಂಗದಲ್ಲಿ ಈ ಬಿಲ್ಲನ್ನು ಕ್ರಮವಾಗಿ ಪರ್ಯಾಲೋಚಿಸುವಾಗ ಬಂದು ತಿದ್ದುಪಾಟನ್ನು ಹೇಳಬಹುದು.

ಮಿ॥ ರಂಗೈಯ್ಯಂಗಾರು, 1905ರ 6ನೆ ಆಕ್ಟಿನಿಂದ ತಿದ್ದುಪಾಟಾಗಿರುವ ಬ್ರಿಟಿಷ್ ಇಂಡಿಯರ್ ಕೋರ್ಟು ಏಜ್ ಆಕ್ಟಿನ 7ನೆ ಪ್ರಕರಣದ (Xi)ನೆ ಪರಿಚ್ಛೇದದ (c. c.) ವಾಕ್ಯವನ್ನು ಓದಿ ಹೇಳಿದುದೇನಂದರೆ :—ಬ್ರಿಟಿಷ್ ಇಂಡಿಯರ್ ಆಕ್ಟಿನಲ್ಲಿ ಮಾಡಿರುವ ತಿದ್ದುಪಾಟು ಬಹಳ ಸುಲಭವಾಗಿ ಈಗ ನಾವು ಮಾಡಬೇಕೆಂದಿರುವ ತಿದ್ದುಪಾಟನಲ್ಲಿ ಯೋಚಿಸಿರುವ ಎಲ್ಲಾ ಸಂದರ್ಭಗಳಿಗೂ ಲಗಾವಾಗುತ್ತದೆ. ಬಂದು ಕನಿಷ್ಠ ರುಸುವಾದ 10 ರೂಪಾಯನ್ನು ಗೊತ್ತುಮಾಡುವುದಕ್ಕೆ ಯಾವ ಕಾರಣವೂ ಇಲ್ಲ. ಬ್ರಿಟಿಷ್ ಇಂಡಿಯಾವಿನಲ್ಲಿ ಇರುವ ಹಾಗೆ ವರ್ಷಗಟ್ಟಳೆಯ ಗುತ್ತಿಗೆಯಾ ಬಾಡಿಗೆಯ ಬೆಲೆಗೆ ಅನುಗುಣವಾಗಿ ಕೋರ್ಟು ರುಸುವನ್ನು ಕೊಡತಕ್ಕದ್ದೆಂದು ನಾವು ಸುಲಭವಾಗಿ ನಿಯಮ ಮಾಡಬಹುದು. ಈ ಬಿಲ್ಲನ ಕಾರ್ಯವನ್ನು ವಹಿಸಿರುವ ಪ್ರಾಜ್ಞರಾದ ಸಭಿಕರು ವರ್ಷಗಟ್ಲೆಯ ಗುತ್ತಿಗೆ ಯಾ ಬಾಡಿಗೆಯ ಮೇಲೆ ಕೋರ್ಟು ರುಸುವನ್ನು ಕೊಟ್ಟು ಗುತ್ತಿಗೆಗೆ ಕೊಟ್ಟಿದ್ದ ಸ್ವತ್ತಿನ ಸ್ವಾಧೀನತೆಗಾಗಿ ಜಮಿನಿನ ಒಡೆಯನ ಮೇಲೆ ಒಕ್ಕಲು ವ್ಯಾಜ್ಯ ಮಾಡಬಹುದೆಂದು ಹೇಳಿ ಅಂಥಾ ರಿಯಾಯತಿಯನ್ನೇ ಜಮಿನಿನ ಒಡೆಯನಿಗೂ ತೋರಿಸಬೇಕೆಂದು ಕೇಳಿದರು. ಈ ವಿಷಯದಲ್ಲಿ ಅವರ ಅಭಿಪ್ರಾಯವೂ ನಮ್ಮ ಅಭಿಪ್ರಾಯವೂ ಒಂದೇಯಾಗಿದೆ. ಒಕ್ಕಲು ತರುವ ವ್ಯಾಜ್ಯಕ್ಕೆ ಸಂಬಂಧಪಡುವ ನಿಯಮವನ್ನು ತಿದ್ದುಪಾಟು ಮಾಡಬಹುದಾಗಿ ನನಗೆ ತೋರುತ್ತದೆ. ಈಗಿರುವ ನಿಯಮದ ಮೇರೆ ತನಗೆ ಗುತ್ತಿಗೆಗೆ ಒಕ್ಕದ್ದು ಅನ್ಯಾಯವಾಗಿ ತಪ್ಪಿಹೋಗಿರುವ ಸ್ವತ್ತಿನ ಸ್ವಾಧೀನತೆಯನ್ನು ಪುನಃ ಪಡೆಯುವುದಕ್ಕೋಸ್ಕರ ಸ್ವಲ್ಪ ಬೆಲೆಯ ಸ್ಟ್ಯಾಂಪಿನ ಮೇಲೆ ಒಕ್ಕಲು ವ್ಯಾಜ್ಯ ಮಾಡಲು ಅನುಕೂಲವಾಗಿದೆ. ಜಮಿನಿನ ಒಡೆಯನು ಅದರ ಸ್ವಾಧೀನತೆಯನ್ನು ಕೊಡುವುದೇ ಇಲ್ಲವೆಂದು ಹೇಳಿದರೆ ಗುತ್ತಿಗೆಗೆ ಬರೆದುಕೊಟ್ಟಿದ್ದ ಸ್ವತ್ತಿನ ಸ್ವಾಧೀನತೆಯನ್ನು ಪಡೆಯುವುದಕ್ಕೋಸ್ಕರ ಸ್ವಲ್ಪ ಬೆಲೆಯ ಸ್ಟ್ಯಾಂಪಿನಮೇಲೆ ಒಕ್ಕಲು ಜಮಿನಿನ ಒಡೆಯನ ಮೇಲೆ ವ್ಯಾಜ್ಯ ತರುವುದಕ್ಕೆ ಈಗಿರುವ ನಿಯಮದಲ್ಲಿ ಅವಕಾಶವೇ ಇಲ್ಲ. ಈಗ ಮಾಡಬೇಕೆಂದಿರುವ ತಿದ್ದುಪಾಟಿನ ಸಂಬಂಧದಲ್ಲಿ ಇರುವ ಮತ್ತೊಂದು ಕಷ್ಟವೇನೆಂದರೆ ಪ್ರತಿವಾದಿಯು ಕುದ್ದಾಗಿ ಗುತ್ತಿಗೆಯ ಕರಾರು ನಡೆಯಲೇ ಇಲ್ಲವೆಂದು ಹೇಳಿದರೆ ಏನುಮಾಡಬೇಕು? ವಾದಿ ಪ್ರತಿವಾದಿಗಳಿಗೆ ಜಮಿನಿನ ಒಡೆಯನಾಗಿ ಮತ್ತು ಒಕ್ಕಲಾಗಿ ಸಂಬಂಧವಿರುವುದನ್ನು ಕುರಿತ ಬಂದು ನಿರ್ಧಾರಣಾಂಶದ ವಿಚಾರಣೆಗೆ ವ್ಯಾಜ್ಯವನ್ನು ನಿಬಂಧಿಸಬೇಕೇ, ಮತ್ತು ಅಂಥಾ ನಿರ್ಧಾರಣಾಂಶವು ವಾದಿಗೆ ವಿರೋಧವಾಗಿ ಕಂಡು ಬಂದರೆ ಸ್ಪೆಸಿಫಿಕ್ ರಿಲೀಫ್ ಆಕ್ಟಿನ 9ನೆ ಪ್ರಕರಣಕ್ಕೆ ಬಳಪಡುವ ಬಂದು ಫೂಟು ವ್ಯಾಜ್ಯದ ಸಾದೃಶ್ಯದ ಮೇಲೆ ವ್ಯಾಜ್ಯವನ್ನು ತಳ್ಳುಪಡಿ ಮಾಡಬೇಕೆ ಅಥವಾ ಹೆಚ್ಚು ಕೋರ್ಟು ರುಸುವನ್ನು ಕೊಟ್ಟರೆ ಹಕ್ಕಿನ ವಿಷಯವಾಗಿ ವ್ಯಾಜ್ಯವು ವಿಚಾರಣೆಯಾಗುವುದಕೆ ಈ ಸಭೆಯವರು ನಿಯಮ ಮಾಡುವರೋ? ಇವೇ ಮೊದಲಾದ ವಿಷಯಗಳನ್ನು ಆಲೋಚಿಸಬೇಕಾಗಿದೆ.

ಇವು ನಿಯುಕ್ತ ಸಮಾಜದಲ್ಲಿ ಚರ್ಚಿಸಬೇಕಾದ ವಿಷಯಗಳಾಗಿವೆ ಎಂದು ದೀವಾನರು ಹೇಳಿದರು ಮತ್ತು ಸಭೆಯವರು ಸಹ ಅದೇ ಅಭಿಪ್ರಾಯವುಳ್ಳವರಾಗಿದ್ದರು.

ಬಿಲ್ಲನ್ನು ಓದಬೇಕೆಂಬ ಬಿನ್ನಹವನ್ನು ಸಭೆಯು ಸಮ್ಮತಿಗೆ ಹಾಕಿ ನಿರ್ವಹಿಸಲಾಯಿತು, ಮತ್ತು ಬಿಲ್ಲನ್ನು ಮಿ॥ ಟಿ. ಅನಂದರಾವ್, ಮಿ॥ ಎ. ರಂಗಸಾಮೈಯಂಗಾರ್, ಮಿ॥ ಎನ್. ನಾರಾಯಣರಾವ್, ಮಿ॥ ಎಂ. ಸಿ. ರಂಗೈಯಂಗಾರ್, ಮಿ॥ ಬಿ. ನಾಗಪ್ಪ, ಇವರು ಸೇರಿರುವ ಬಂದು ನಿಯುಕ್ತ ಸಮಾಜಕ್ಕೆ 1907ನೆ ಇಸವಿಯ ನವೆಂಬರ್ 28ನೆ ತಾರೀಖಿಗೆ ಮುಂಚಿತವಾಗಿ ರಿಪೋರ್ಟು ಮಾಡತಕ್ಕ ಬಗ್ಗೆ ಕಳುಹಿಸಲಾಯಿತು.

ಅನಂತರ ಸಂಗವು ಮುಗಿಯಿತು.

ವಿ. ಪಿ. ಮಾಧವರಾವ್,
ಅಧ್ಯಕ್ಷರು.